ಬರ್ದ್ಯೆತ್ರಿ?" ಎಂದು ಸೊಂಟದ ಮೇಲೆ ಕೈ ಇರಿಸಿ ನಕ್ಕವಳ ಕಣ್ಣಲ್ಲಿ ತೊಯ್ದ ಇಂದ್ರಧನುಸ್ಸು!

ಬಾಲ್ಯದಿಂದಲೇ ನೋವುಂಡವಳು ಯಶೋದೆ; ಹುಟ್ಟಿನಿಂದ ತಂದೆಯ ಮುಖವನ್ನೂ ನೋಡದ ಅಭಾಗ್ಯೆ. ಅವಳ ತಾಯಿ ಸಾವಿತ್ರಿ ಮೂಲತಃ ಗುಲ್ಬರ್ಗದವಳು; ಅಲ್ಲಿ ಆಗಿದ್ದ ಹಿಂದೂ ಮುಸ್ಲಿಮರ ದೊಡ್ಡ ದೊಂಬಿಯಲ್ಲಿ ಅವರ ಓಣಿಯ ಮುಸಲ್ಮಾನರ ಬಹುತೇಕ ಮನೆಗಳನ್ನು ಸುಟ್ಟು ಹಾಕಿದ್ದರು. ಓಣಿಯಲ್ಲಿ ಎಚ್ಚರದಪ್ಪಿ ಬಿದ್ದಿದ್ದ ಹದಿನಾಲ್ಕರ ಬಾಲೆಯನ್ನು ಕಂಡು ಮರುಗಿ ತಂದು ಸಾಕಿದ್ದರು ವೀರಭದ್ರನ ತಂದೆ ತಾಯಿ. ಹೆಸರು ಕೂಡಾ ಹೇಳಲಾಗದ ಪರಿಸ್ಥಿತಿಯಲ್ಲಿದ್ದವಳನ್ನು ಸಾವಿತ್ರಿಯೆಂದು ಕರೆದು ಹರೆಯಕ್ಕೆ ಬಂದಿದ್ದ ಮಗ ವೀರಭದ್ರನಿಗೆ ಆರೇ ತಿಂಗಳಲ್ಲಿ ಕೊಟ್ಟು ಲಗ್ನವನ್ನೂ ಮಾಡಿದ್ದರು! ಮೊದಲ ವರ್ಷದ ನಾಗರಪಂಚಮಿಯ ತಂಬಿಟ್ಟು ಚಿಗಳಿ ತಿಂದು ಖುಷಿಯಿಂದ ಜೋಡಿಯಾಗಿ ಜೋಕಾಲಿ ತೂಗುತ್ತಿದ್ದ ಗಂಡ ಹೆಂಡಿರಿಬ್ಬರೂ ಜೀಕಿನ ಆಯತಪ್ಪಿ ದೊಪ್ಪನೆ ಬಿದ್ದಿದ್ದರು. ಬೀಳುವಾಗ ಸಾವಿತ್ರಿ ಅಚಾನಕ್ಕಾಗಿ ಕೂಗಿದ್ದಿಷ್ಟೇ 'ಯಾ ಅಲ್ಲಾ!' ಬಿದ್ದ ಎಳೆಯ ಬಸುರಿ ಹುಡುಗಿಯನ್ನೂ ಎತ್ತದೆ ಮಾತು ಬಾರದೆ ಆವಾಕ್ಕಾಗಿ ನಿಂತುಬಿಟ್ಟಿದ್ದ ವೀರಭದ್ರ. ಯಾರು ಎಂಥ ಸಮಜಾಯಿಷಿ ಹೇಳಿದರೂ ತನ್ನ ಹೆಂಡತಿ ಹಿಂದೂವಲ್ಲ ,ಮುಸ್ಲಿಮಳು ಎಂಬ ಮಾತನ್ನು ಅವನಿಗೆ ಒಪ್ಪಿಕೊಳ್ಳಲಾಗಿರಲೇ ಇಲ್ಲ. ರಾಣಿಯಂತೆ ಮೆರೆಸುತ್ತಿದ್ದವ ಅವಳನ್ನು ಕಾಲಕಸವಾಗಿ ಕಾಣಲಾರಂಭಿಸಿದ್ದ. ಮದುವೆಗೆ ಮುನ್ನ ತನ್ನ ಹುಟ್ಟಿನ ಸತ್ಯ ಹೇಳಲಾಗದ ಅನಾಥ ಬಾಲೆಯ ಅಸಹಾಯಕತೆಯನ್ನು ಅರ್ಥ ಮಾಡಿಕೊಳ್ಳುವಷ್ಟು ವಿಚಾರವಂತನಾಗಲೀ ಅವಳ ತಪ್ಪನ್ನು ಕ್ಷಮಿಸುವಷ್ಟು ಹೃದಯವಂತನಾಗಲೀ ಅವನಾಗಿರಲಿಲ್ಲ. ಬಳಿಗೆ ಬರುವುದಂತೂ ದೂರವುಳಿಯಿತು. ಅವಳು ಮಾಡಿದ ರೊಟ್ಟಿ ಪಲ್ಲೆಯನ್ನೂ ಮುಟ್ಟದೆ, ತನ್ನ ತಂದೆತಾಯನ್ನೂ ವಂಚನೆಯಲ್ಲಿ ಪಾಲ್ಗೊಂಡ ಮಂದಿ ಎಂಬಂತೆ ದೂರಲಾರಂಭಿಸಿದಾಗ ಮನೆ ಮಂದಿಗೂ ಇವಳು ನುಂಗಲಾಗದ, ಉಗುಳಲಾಗದ ತುಪ್ಪವಾಗಿದ್ದಳು; ದಿಕ್ಕು ತಪ್ಪಿದ ತರಗೆಲೆಯಂತಾಗಿತ್ತು ಸಾವಿತ್ರಿಯ ಬಾಳು. ಇನ್ನೂ ಹುಟ್ಟದಿರುವ ತನ್ನ ಕರುಳಕುಡಿಯನ್ನೂ ದ್ವೇಷಿಸಲಾರಂಭಿಸಿದಾಗ ಆ ಮನೆಯಲ್ಲಿನ್ನು ಇರಲಾಗದೆ ಸಾವಿತ್ರಿ ಇದ್ದಬದ್ದ ಧೈರ್ಯ ಒಟ್ಟುಗೂಡಿಸಿ ಅವರಿವರ ಕಾಲು ಕಟ್ಟಿ ನಾಲ್ಕಾರು ಮನೆಗಳ ಕೆಲಸ ಮಾಡುತ್ತ ತನ್ನದೇ ಪುಟ್ಟ ಮನೆ ಮಾಡಿಕೊಂಡು ಅದೇ ಊರಲ್ಲಿ ಬೇರೆಡೆ ಇರುತ್ತಾ, ಯಶೋದೆಗೆ ಜನ್ಮ ಕೊಟ್ಟಿದ್ದಳು. ಹೊಟ್ಟೆ ತುಂಬಿಸುವುದಕ್ಕಾಗಿ ಸೆಣಸುತ್ತಿದ್ದ ಸಾವಿತ್ರಿಗೆ ಸಮಯ ಹೇಗೆ ಓಡಿತು, ತನ್ನ ತಲೆ ಯಾವಾಗ ನೆರೆಯಿತು, ಯಶೋದೆಗೆ ಯೌವನ ತುಂಬಿತ್ಯಾವಾಗ ಎಂಬುದು ಗೊತ್ತಾಗಲೇ ಇಲ್ಲ. ಅವಳು ಕೆಲಸ ಮಾಡುತ್ತಿದ್ದ ಮಾಲೀಕರ ಹೊಲಗಳ ಗುತ್ತಿಗೆ ಹಿಡಿದಿದ್ದ ನವಲೂರಿನ ರೈತನೊಬ್ಬ ಬಾಲ್ಯದಿಂದಲೂ ಯಶೋದೆಯನ್ನು ಕಂಡಿದ್ದ. ಅವನ ಮೂಲಕ ಎರಡೆಕರೆ ಹೊಲ, ತೋಟ, ನಾಲ್ಕು ಎಮ್ಮೆಗಳ ಮಾಲೀಕ ನಿಂಗರಾಜನ ಸಂಬಂಧ ಹದಿನಾರರ ಮಗಳಿಗೆ ಕೂಡಿಬಂದಾಗ ಮೊದಲಬಾರಿ ಆನಂದದಲ್ಲಿ ತೇಲಾಡಿದ್ದಳು ಸಾವಿತ್ರಿ. ಬಿಟ್ಟಾಗಿನಿಂದ ಗಂಡನ ಮುಖ ನೋಡದವಳು ಲಗ್ನವನ್ನೂ ತಾನೊಬ್ಬಳೇ ನಿಂತು ಮಾಡಿಕೊಟ್ಟಿದ್ದಳು ಆ ಗಟ್ಟಿಗಿತ್ತಿ. ನಿಂಗಪ್ಪನೂ ಅತ್ತೆಯನ್ನು ಒಬ್ಬಳೇ ಅಲ್ಲಿ ಇರಗೊಡದೆ ಹೆಂಡತಿಯೊಂದಿಗೆ ನವಲೂರಿಗೆ ಕರೆತಂದಿದ್ದ. ಅವ್ವನ ಕೈ ತುತ್ತು ಊಟ, ನಲ್ಲನ ಪ್ರೀತಿ ತುಂಬಿದ ನೋಟ! ಸ್ವರ್ಗಕ್ಕೆ ಎರಡೇ ಗೇಣಿತ್ತು ಯಶೋದೆಗೆ. ಆದರೆ ಎಲ್ಲ ಅಂದುಕೊಂಡಂತೆ ನಡೆದುಬಿಟ್ಟರೆ ಆ ವಿಧಿಯ ಕೆಲಸವಾದರೂ ಏನು? ಲಗ್ನವಾದ ನಾಲ್ಕು ವರ್ಷಗಳಲ್ಲಿ ತಲೆಯ ಮೇಲಿದ್ದ ಮಮತೆಯ ಛತ್ರಿ ಹಾರಿಹೋಗಿತ್ತು. ಬದುಕೆಲ್ಲಾ ಬವಣೆಪಟ್ಟ ಸಾವಿತ್ರಿಗೆ ನೆಮ್ಮದಿಯ ದಿನಗಳು ಶುರುವಾಗುವುದರಲ್ಲಿಯೇ ಮುಗಿದಿದ್ದವು. ಬಾಲ್ಯದಿಂದ ಎಂಥೆಂಥಾ ನೋವುಂಡಾಗಲೂ